ದೇಸಾಯರು ಬರೆಯಲಾರಂಭಿಸಿದ್ದರು. ಹಾಳೆಗಳ ಮೇಲೆ ಹಾಳೆಗಳು ಖಾಲಿಯಾಗುತ್ತಿದ್ದವು. ಬರೆದದ್ದು ದೇಸಾಯರಿಗೆ ಸಮಾಧಾನ ತರದಿದ್ದರೆ, ಆ ಹಾಳೆಗಳು ಅವರ ಬಿಗಿಮುಷ್ಠಿಯಲ್ಲಿ ಛಕ್ಕಂತ ಹಿಸುಕಿಸಿಕೊಂಡು ಉಂಡೆಯಾಗಿ ಮೂಲೆಯಲ್ಲಿ ಬಿದ್ದು ಮುದುಡಿ ಮಲಗುತ್ತಿದ್ದವು. ಅದು ಐತಿಹಾಸಿಕ ಕಾದಂಬರಿಯಾಗಲಿದೆಯೋ, ಮಹಾಕಾವ್ಯವಾಗಲಿದೆಯೋ, ಇತಿಹಾಸ ಗ್ರಂಥವಾಗಲಿದೆಯೋ ಎಂಬ ಅಂದಾಜು ಅವರಿಗೂ ಇರಲಿಲ್ಲ. ತಾಯಿ ಸರಸ್ವತಿ ತಮ್ಮೆದೆಯಲ್ಲಿ ನೆಲೆಸಿ, ಬೆರಳ ತುದಿಯಲ್ಲಿ ಯಾವ ಶಬ್ದ ಚಿಮ್ಮಿಸುವಳೋ ಅದಕ್ಕಾಗಿ ಕಾಯುವುದಷ್ಟೇ ಅವರ ವ್ರತವಾಗಿತ್ತು. ಆದರೆ, ಅವತ್ತೊಂದು ಸಂಜೆ ಏನೋ ಮೈಮೇಲೆ ಬಂದವರಂತೆ ಅವರು ಬರೆಯಲು ಶುರು ಮಾಡಿದಾಗ ಉಕ್ಕಿದ ಹರಿವು ಯಾವ ಮೂಡನ್ನೂ, ಯಾವ ವಿಸ್ಕಿಯನ್ನೂ ಬೇಡಲಿಲ್ಲ! ಹಗಲು, ಸಂಜೆ, ರಾತ್ರಿಯೆನ್ನದೆ ಬರೆದು ಬರೆದು ಕೊನೆಗೂ ಅದು ಬೃಹತ್ ಕಾದಂಬರಿಯೇ ಆಗಿ, ಹಸ್ತಪ್ರತಿ 1000 ಪುಟ ದಾಟಿ ಮೆಲ್ಲಗೆ 1008ನೇ ಪುಟ ತಲುಪಿದಾಗ, ಆ ಸಂಖ್ಯೆಯಲ್ಲಿದ್ದ 1 + 8 ಎಂದು ಕೂಡಿಸಿ ದೇಸಾಯಿ, 'ಲಕ್ಕಿ ನಂಬರ್ 9!' ಎಂದು ತೃಪ್ತಿಯಿಂದ ಬರವಣಿಗೆಯನ್ನು ಒಂದು ಘಟ್ಟಕ್ಕೆ ತಂದು ನಿಲ್ಲಿಸಿದರು. ಇನ್ನು ಮುಂದಿನ ಭಾಗಗಳು ನಿಕ್ಕಿ ಎಂದು ಬೆಳದಿಂಗಳ ರಾತ್ರಿ ಕೋಟೆಯ ತುಂಬ ಹರೆಯದ ಹುಡುಗನಂತೆ ಪುಟಿಯುತ್ತಾ ಅಡ್ಡಾಡಿದರು.

ಮತ್ತೆ ಪ್ರವಾಸಿ ಬಂಗಲೆಗೆ ಬಂದವರೇ ಆವರೆಗೆ ಬರೆದ ಪುಟಗಳನ್ನು ಪ್ರೇಯಸಿಯ ಕೋಮಲ ಹಸ್ತದಂತೆ ಮೃದುವಾಗಿ ಕೈಗೆತ್ತಿಕೊಂಡು ಅಲ್ಲಲ್ಲಿ ಓದುತ್ತಾ ನಡುನಡುವೆ ಎದೆಯುಬ್ಬಿ ತಂತಾವೇ ತಲೆತೂಗಿದರು:

'...ವಸಂತ ಮಾಸ ಅಡಿಯಿಟ್ಟ ಶುಭ ದಿನ ಮೂರು ದಿಕ್ಕುಗಳ ಮೂರು ರಾಜ್ಯಗಳ ಮೇಲೆ ದಂಡೆತ್ತಿ ಮುನ್ನಡೆದು, ಮೂರೇ ಮಾಸದಲ್ಲಿ ಮೂರೂ ರಾಜ್ಯಗಳನ್ನು ಕೈವಶಗೈದು, ಮೂವರು ರಾಜರನ್ನು ಹೆಡೆಮುರಿ ಕಟ್ಟಿ, ಮೂರು ರಾಜ್ಯಗಳ ಭಂಡಾರ ಸೂರೆ ಹೊಡೆದು, ಆನೆ ಕುದುರೆಗಳ ಮೇಲೆ ಹೊನ್ನಿನ ರಾಶಿಯನ್ನೇ ಹೇರಿಕೊಂಡು ಗಂಡರಗಂಡ, ಚಂಡಪ್ರಚಂಡ, ತ್ರಿಭುವನ ಮಹಿಪಾಲ ಮಹಾರಾಜರು ರಾಜಬೀದಿಯಲ್ಲಿ ರಾಜಗಾಂಭೀರ್ಯದಿಂದ ಅಡಿಯಿಟ್ಟರು. ಮಹಿಪಾಲರ ಸಿಂಹಸದೃಶವಾದ ಗಂಭೀರ ನಡಿಗೆಗೆ ಪುರವು ಪುಳಕಗೊಂಡಿತು. ದುಂದುಭಿಗಳು ಮೊಳಗಿದವು. ಉಪ್ಪರಿಗೆಗಳಲ್ಲಿ ನಿಂತಿದ್ದ ಅಂಗನೆಯರು ಪುಷ್ಪವೃಷ್ಟಿಗೈದರು. ಈ ಅಮೃತ ಗಳಿಗೆಗಾಗಿ ಕಾದಿದ್ದಂತೆ ಮೇಘಗಳು ಆಗಸದಲ್ಲಿ ಒಗ್ಗೂಡಿ ಹನಿಸಿಂಚನಗರೆದವು. ಬಿರು ಬೇಸಿಗೆಯಲ್ಲಿ ಬಸವಳಿದಿದ್ದ ಮಹಾಜನತೆ ಮಹಾರಾಜರ ಪಾದಧೂಳಿಯೊಡನೆ ಹಿತವಾಗಿ ಮೇಲೆದ್ದ ಮೊದಲ ಮಳೆಯ ಮಣ್ಣುಗಂಪನ್ನು ಹೀರಿ ಉಲ್ಲಸಿತವಾಗತೊಡಗಿತು...'

'ಅಬ್ಬ! ನನ್ನ ಗೀಚು ಅಕ್ಷರಗಳಲ್ಲೇ ಇಷ್ಟು ಮೋಹಕವಾಗಿ ಕಾಣುತ್ತಿರುವ ಈ ಬಣ್ಣನೆ ಇನ್ನು ಮುದ್ರಿತ ಪುಟಗಳಲ್ಲಿ ಇನ್ನೆಷ್ಟು ಕಂಗೊಳಿಸಬಹುದು! ನನ್ನ ಕಾಯಂ ಓದುಗರಲ್ಲಿ ಎಂಥೆಂಥ ಪುಲಕಗಳನ್ನು ಚಿಮ್ಮಿಸಬಹುದು!' ಎಂದು ಊಹಿಸುತ್ತಾ ದೇಸಾಯರು ಮತ್ತೊಮ್ಮೆ ಮುದಗೊಂಡರು. ಇದಲ್ಲವೇ ಕುಮಾರವ್ಯಾಸ ಹೇಳಿದ 'ಪದವಿಟ್ಟಳುಪದೊಂದಗ್ಗಳಿಕೆ!' ಎನ್ನಿಸಿ ಮೈಯುಬ್ಬಿ ಮತ್ತೆ ಹಾಳೆಗಳತ್ತ ನೋಡಿದರು: ಈ ಬಗೆಯ ಬಣ್ಣನೆ ನವೋದಯ, ಪ್ರಗತಿಶೀಲ ಮಾರ್ಗಗಳ ಕಾದಂಬರಿ ದಿಗ್ಗಜರಿಗೂ ದಕ್ಕಿದಂತಿಲ್ಲ! ಇನ್ನು ಆ ನವ್ಯ, ದಲಿತ, ಬಂಡಾಯ ಸಾಹಿತಿಗಳ ಸಿಡುಕು ಶೈಲಿ ಇದರ ಹತ್ತಿರಕ್ಕೂ ಬರಲಾರದು! ಇದೀಗ ಹೊಳೆದ ಈ ಮೆಚ್ಚುಗೆಯ ನುಡಿಗಳು ಕೃತಿಯ ಬೆನ್ನುಡಿಗೆ ಬೇಕಾಗಬಹುದು ಎಂದು ತಕ್ಷಣ ಡೈರಿ ಕೈಗೆತ್ತಿಕೊಂಡು ಎರಡೂ ವಾಕ್ಯಗಳನ್ನು ಮುತ್ತು ಪೋಣಿಸಿದಂತೆ ಬರೆದಿಟ್ಟರು. ಡೈರಿ ಬದಿಗಿಟ್ಟು, ತಾಯಿಯೊಬ್ಬಳು ತನ್ನದೇ ಸೃಷ್ಟಿಯಾದ ಮಗುವನ್ನು ಹೆಮ್ಮೆಯಿಂದ ನೋಡುವಂತೆ ತಾವು ಬರೆದ ಪುಟಗಳನ್ನು ಪ್ರೀತಿಯಿಂದ ದಿಟ್ಟಿಸಿ ನೋಡಿದರು. ಇದೊಂದು ಬೃಹತ್ ಇತಿಹಾಸ ಗ್ರಂಥವಾದರೂ ಅಚ್ಚರಿಯಲ್ಲ ಎನ್ನಿಸಿದ ತಕ್ಷಣ, ಈ ಶೈಲಿ ಇತಿಹಾಸ ಗ್ರಂಥಕ್ಕೆ ಒಗ್ಗುವುದೇ ಎಂಬ ಅನುಮಾನ ಹುಟ್ಟಿತು. ಛೇ! ಹಲವು ಸಾಹಿತ್ಯ ಪ್ರಕಾರಗಳನ್ನು ಮಣಿಸಿ ಕರಗತ ಮಾಡಿಕೊಂಡಿರುವ ತನಗೆ ಇಂಥ ಸಣ್ಣಪುಟ್ಟ ಅನುಮಾನಗಳೇ ಹುಟ್ಟಬಾರದು ಎಂದು ತಾಕೀತು ಮಾಡಿಕೊಂಡರು.